

ಈ ಬಗ್ಗೆ ಸಕಾರಾತ್ಮಕವಾಗಿ ಹೇಳಲು ನನಗೆ ಅವಕಾಶ ದೊರೆತಿರುವ ಬಗ್ಗೆ ಹೆಮ್ಮೆಯೆನಿಸುತ್ತದೆ. ನಾಟ್ಯಶಾಸ್ತ್ರದಲ್ಲಿ ಇದನ್ನು 'ಓದ್ರ ಮಾಗಧಿ' ನೃತ್ಯವೆಂದು ಗುರುತಿಸಿದ್ದಾರೆ. ಭುವನೇಶ್ವರ ಬಳಿಯ ಉದಯಗಿರಿ ಮತ್ತು ಕಂದಗಿರಿಯ ಗುಹೆಗಳಲ್ಲಿ ಪುರಾತನ ಒಡಿಸ್ಸಿ ನೃತ್ಯ ಭಂಗಿಗಳ ಶಿಲ್ಪಗಳಿವೆ. ಅಲ್ಲಿನ ರಾಣಿಗುಂಫಾ ಮತ್ತು ಹಾಥಿಗುಂಫಾ ಗುಹೆಗಳಲ್ಲಿ ಕಂಡುಬರುವ ಶಿಲ್ಪಗಳನ್ನು ಗಮನಿಸಿದರೆ ತಾಂಡವ ಶೈಲಿಯ ಅಭಿನಯ ಪ್ರಧಾನ ಶಿಲ್ಪಗಳನ್ನು ಕಾಣಬಹುದು. ಇಷ್ಟೊಂದು ಇತಿಹಾಸವಿರುವ ಒಡಿಸ್ಸಿಯ ಪರಂಪರೆಯು ದೀರ್ಘವಾದುದು ಎಂಬುದು ಹೆಮ್ಮೆಯ ವಿಷಯ. ದೇವಾಲಯವನ್ನು ಅನುಸರಿಸಿಕೊಂಡು ಬಂದ ಒಡಿಸ್ಸಿ ನೃತ್ಯಕಲೆಯು ಇಂದು ದೇಶದ ಗಡಿಗಳನ್ನು ಮೀರಿ ತನ್ನ ಖ್ಯಾತಿಯನ್ನು ವಿಸ್ತರಿಸಿಕೊಂಡಿದೆ. ಒಡಿಸ್ಸಿಯ ಜೊತೆಗೆ ಒಳ್ಳೆಯ ಮತ್ತು ಅಷ್ಟೇನೂ ಒಳ್ಳೆಯದಲ್ಲದ ಅಂಶಗಳು ಕಂಡರೂ ಅವು ಕಲಾಪ್ರಕಾರದ ಪ್ರಸಿದ್ಧಿಗೆ ತೊಡಕಾಗಿಲ್ಲ. ಕಲೆಗೆ ಪ್ರಾಮಾಣಿಕವಾಗಿ ತಮ್ಮನ್ನು ಅರ್ಪಿಸಿಕೊಂಡ ಕಲಾವಿದರು ಮತ್ತು ಗುರುಗಳ ತಂಡದವರು ಕಲೆಯ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಎಲ್ಲೋ ಕೆಲವೆಡೆ ಕೆಲವರು ವಾಣಿಜ್ಯ ದೃಷ್ಟಿಯಿಂದ ಮಾಡುವ ಪ್ರಚಾರವು, ಒಡಿಸ್ಸಿಯ ಕಲಾತ್ಮಕ ವಿಕಾಸಕ್ಕೆ ಪೂರಕವಾಗಿಲ್ಲದೇ ಇರಬಹುದು. ಒಡಿಸ್ಸಿಯನ್ನು ಸಾಂಸ್ಥೀಕರಣಗೊಳಿಸಿದಾಗ ಅದು ಅಪಮೌಲ್ಯಗೊಳ್ಳಬಹುದು. ಒಟ್ಟಾರೆಯಾಗಿ ಅದು ತನ್ನ ಪ್ರಾದೇಶಿಕತೆಯನ್ನು ಮೀರಿ ಜಾಗತಿಕ ವೇದಿಕೆಯಲ್ಲಿ ರಾರಾಜಿಸುತ್ತಿದೆ ಎನ್ನಬಹುದು.